ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	94 (1029)
2 ಸದಸ್ಯರ ಹೆಸರು	:	ಶ್ರೀ. ಬಿ.ಎಂ.ಫಾರೂಖ್ (ವಿಧಾನ ಸಭೆಯಿಂದ ಚುನಾಯಿತರಾದವರು)
3 ಉತ್ತರಿಸಬೇಕಾದ ದಿನಾಂಕ	:	21-09-2021
4 ಉತ್ತರಿಸುವ ಸಚಿವರು	:	ನಗರಾಭಿವೃದ್ಧಿ ಸಚಿವರು

ಕ್ರ. ಸಂ.	ಪ್ರಶ್ನೆಗಳು	ಉತ್ತರ
ಅ)	ಮಂಗಳೂರಿನಲ್ಲಿರುವ ಸುರತ್ಕಲ್ ನಗರದಲ್ಲಿ ಯು.ಜಿ.ಡಿ ಯೋಜನೆಯ ಒಳಚರಂಡಿ ಕಾಮಗಾರಿಯು ಸಂಪೂರ್ಣವಾಗಿ ವಿಫವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಹಣಕಾಸು ಸಂಸ್ಥೆ (ಕೆ.ಯು.ಐ.ಡಿ.ಎಫ್.ಸಿ) ಏಷ್ಯನ್ ಅಭಿವೃದ್ಧಿ ಬ್ಯಾಂಕ್(ಎಡಿಬಿ) ಮತ್ತು ಕೇಂದ್ರ ಪುರಸ್ಕೃತ ಅಮೃತ್ ನೆರವಿನ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಹೂಡಿಕೆ (ಕ್ವಿಮಿಪ್) ಕಾರ್ಯಕ್ರಮದಡಿ ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಒಳಚರಂಡಿ ಮತ್ತು ಕುಡಿಯುವ ನೀರು ಸರಬರಾಜು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸುರತ್ಕಲ್ ವಲಯದಲ್ಲಿ ಹಿಂದಿನ ಯೋಜನೆಯಲ್ಲಿ 2006 ರಿಂದ 2011 ರ ಅವಧಿಯಲ್ಲಿ ಒಳಚರಂಡಿ ವ್ಯವಸ್ಥೆಯ ಮ್ಯಾನ್‌ಹೋಲ್‌ಗಳನ್ನು ಸ್ಥಳೀಯವಾಗಿ ಲಭ್ಯವಿರುವ ಲ್ಯಾಟರೈಟ್ ಸ್ಟೋನ್‌ಗಳಿಂದ ನಿರ್ಮಿಸಲಾಗಿರುತ್ತದೆ. ಅದರಲ್ಲಿ ಕೆಲವೊಂದು ಲ್ಯಾಟರೈಟ್ ಸ್ಟೋನ್‌ಗಳಿಂದ ನಿರ್ಮಿಸಲ್ಪಟ್ಟ ಮ್ಯಾನ್‌ಹೋಲ್‌ಗಳು ಕುಸಿದು, ಮ್ಯಾನ್‌ಹೋಲ್‌ಗಳು ಮತ್ತು ಒಳಚರಂಡಿ ಪೈಪ್‌ಗಳು ಬಂದ್ ಆಗಿ ಸ್ಥಳೀಯ ಪ್ರದೇಶದಲ್ಲಿ ಒಳಚರಂಡಿ ವ್ಯವಸ್ಥೆ ಅಸ್ತವ್ಯಸ್ಥಗೊಂಡಿರುವ ಹಿನ್ನಲೆಯಲ್ಲಿ ಹಾಲಿ ಇರುವ ಒಳಚರಂಡಿ ವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವ ಕಾಮಗಾರಿಯನ್ನು ಕ್ವಿಮಿಪ್ ಕಾರ್ಯಕ್ರಮದಡಿ ಕೇಂದ್ರ ಪುರಸ್ಕೃತ ಅಮೃತ್ ನೆರವಿನೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದ್ದು ಕಾಮಗಾರಿ ಪ್ರಗತಿಯಲ್ಲಿರುತ್ತದೆ.
ಆ)	ಭೂಮಿಯ ಒಳಗೆ ಕೊಳವೆಯ ಮೂಲಕ ಹೋಗಬೇಕಾಗಿರುವ ಡ್ರೈನೇಜ್ ನೀರು ರಸ್ತೆಗಳ ಮೇಲೆ ಹರಿಯುತ್ತಿರುವುದರಿಂದ ಬಾವಿಯ ನೀರೆಲ್ಲಾ ಕಲುಷಿತವಾಗುತ್ತಿದ್ದು, ಇದಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಕ್ವಿಮಿಪ್ ಕಾರ್ಯಕ್ರಮದಡಿ ಕೇಂದ್ರ ಪುರಸ್ಕೃತ ಅಮೃತ್ ನೆರವಿನೊಂದಿಗೆ ಸುರತ್ಕಲ್ ವಲಯ ಒಳಗೊಂಡಂತೆ ಹಾಲಿ ಇರುವ ಒಳಚರಂಡಿ ವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವ ಕಾಮಗಾರಿಯ ಗುತ್ತಿಗೆಯನ್ನು ನೀಡಲಾಗಿದ್ದು ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಕಾಮಗಾರಿಯಲ್ಲಿನ ಪ್ರಗತಿಯ ವಿವರ ಈ ಕೆಳಗಿನಂತಿದೆ:

ಕ್ರ. ಸಂ	ಕಾಮಗಾರಿಯಲ್ಲಿರುವ ಪ್ರಮುಖ ಘಟಕಗಳು	ಪ್ರಸ್ತುತ ಪ್ರಗತಿ
1	29.17 ಕಿ.ಮೀ ಪೈಪ್ ಲೈನ್ ಅಳವಡಿಸುವುದು	20.79 ಕಿ.ಮೀ ಪೈಪ್ ಲೈನ್ ಅಳವಡಿಸಲಾಗಿರುತ್ತದೆ
2	1492 ಸಂಖ್ಯೆ ಹೊಸ ಆರ್‌ಸಿಸಿ ಮ್ಯಾನ್ ಹೋಲ್‌ಗಳ ನಿರ್ಮಾಣ	1245 ಸಂಖ್ಯೆ ಹೊಸ ಆರ್‌ಸಿಸಿ ಮ್ಯಾನ್ ಹೋಲ್‌ಗಳ ನಿರ್ಮಾಣ
3	116 ಕಿ.ಮೀ ಉದ್ದದ ಹಾಲಿ ಒಳಚರಂಡಿ ಪೈಪ್‌ನ ಕ್ಲೀನ್ ಮಾಡಿ ಮರು ಬಳಕೆಗೆ ಸಿದ್ಧಪಡಿಸುವುದು	74 ಕಿ.ಮೀ ಉದ್ದದ ಹಾಲಿ ಒಳಚರಂಡಿ ಪೈಪ್‌ನ ಕ್ಲೀನ್ ಮಾಡಿ ಮರು ಬಳಕೆಗೆ ಸಿದ್ಧಪಡಿಸಿದೆ.
4	3.0 ಕಿ.ಮೀ ತಡೆಗೋಡೆ ನಿರ್ಮಾಣ ಕಾಮಗಾರಿ	2.56 ಕಿ.ಮೀ ತಡೆಗೋಡೆ ನಿರ್ಮಾಣ ಮಾಡಿದೆ.
5	4 ವೆಟ್‌ವೆಲ್‌ಗಳ ಯಂತ್ರೋಪಕರಣಗಳ ದುರಸ್ತಿ ಕಾಮಗಾರಿ	4 ವೆಟ್‌ವೆಲ್‌ಗಳ ಯಂತ್ರೋಪಕರಣಗಳ ಖರೀದಿಸಲು ಕ್ರಮವಹಿಸಲಾಗಿದೆ.

ಕ್ರ. ಸಂ.	ಪ್ರಶ್ನೆಗಳು	ಉತ್ತರ
		ಕರಾವಳಿಯಲ್ಲಿ ಮಳೆ ಮತ್ತು ಕೋವಿಡ್-19 ರ ಕಾರಣ ಕಾಮಗಾರಿ ಪ್ರಗತಿಯಲ್ಲಿ ಕುಂಠಿತಗೊಂಡಿದ್ದು, ಕರಾವಳಿಯಲ್ಲಿ ಮಳೆ ಪ್ರಮಾಣ ಕಡಿಮೆಗೊಂಡ ನಂತರ ಪ್ರಗತಿಯನ್ನು ತ್ವರಿತಗೊಳಿಸಿ ಡಿಸೆಂಬರ್-2021 ರ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು.
ಇ)	ಯು.ಜಿ.ಡಿ ಯೋಜನೆಯ ಭಾಗವಾಗಿ ನಿರ್ಮಾಣಗೊಂಡಿರುವ ವೆಟ್‌ವೆಲ್‌ನಿಂದಾಗಿ ಸಾಂಕ್ರಾಮಿಕ ರೋಗ ಹರಡಲು ಕಾರಣವಾಗುವುದಿಲ್ಲವೇ; ಸರ್ಕಾರ ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಕ್ರಮಕೈಗೊಳ್ಳುವುದೇ; ಹಾಗಿದ್ದಲ್ಲಿ, ಯಾವಾಗ ಕ್ರಮಕೈಗೊಳ್ಳುವುದು;	ವೆಟ್‌ವೆಲ್‌ಗಳನ್ನು ಸುಸ್ಥಿತಿಗೆ ತರುವ ಸಲುವಾಗಿ ಮತ್ತು ತ್ಯಾಜ್ಯ ಸಂಸ್ಕರಣಾ ಘಟಕ (ಎಸ್‌ಟಿಪಿ) ದ ಯಂತ್ರೋಪಕರಣಗಳನ್ನು ಸಂಪೂರ್ಣವಾಗಿ ಬದಲಾಯಿಸಲು ಕೋರಿದ್ದು, ಅದರಂತೆ ಈ ಹೆಚ್ಚುವರಿ ಕಾಮಗಾರಿಗೆ ದಿನಾಂಕ 25.03.2021 ರಂದು ರೂ. 5.19 ಕೋಟಿ ಮೊತ್ತಕ್ಕೆ ಅನುಮೋದನೆ ನೀಡಿದ್ದು, ಯಂತ್ರೋಪಕರಣಗಳ ಖರೀದಿಗಾಗಿ ಈಗಾಗಲೇ ಕ್ರಮವಹಿಸಲಾಗಿದೆ. ಅಲ್ಲದೇ ಕಾಮಗಾರಿಯನ್ನು ಡಿಸೆಂಬರ್-2021 ಗೆ ಪೂರ್ಣಗೊಳಿಸಿ ತ್ಯಾಜ್ಯ ನೀರನ್ನು ತ್ಯಾಜ್ಯ ಸಂಸ್ಕರಣಾ ಘಟಕ (ಎಸ್‌ಟಿಪಿ) ಕ್ಕೆ ಸಾಗಿಸಿ ಸಂಸ್ಕರಿಸಲು ಕ್ರಮವಹಿಸಲಾಗುವುದು.
ಈ)	ತೀರ ಪ್ರದೇಶಗಳಲ್ಲಿ ವಾಸಿಸುವ ಜನರು ಊರನ್ನು ತೊರೆದು ಹೋಗುವ ಸ್ಥಿತಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ತೆಗೆದುಕೊಂಡಿರುವ ಕ್ರಮಗಳೇನು?	ಕೋವಿಡ್-19 ರ ಒಂದು ಮತ್ತು ಎರಡನೇ ಅಲೆಯ ಕಾರಣ ಕಾಮಗಾರಿಯ ಪ್ರಗತಿಯಲ್ಲಿ ವಿಳಂಬವಾಗಿದ್ದು, ಕರಾವಳಿಯಲ್ಲಿ ಮಳೆ ತಗ್ಗಿದ ನಂತರ ಪ್ರಗತಿಯನ್ನು ತ್ವರಿತಗೊಳಿಸಿ ಕಾಮಗಾರಿಯನ್ನು ಡಿಸೆಂಬರ್ 2021 ರೊಳಗೆ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು. ಮನೆಗಳ ಮೇಲ್ಛಾವಣಿಯ ಮಳೆ ನೀರನ್ನು ಒಳಚರಂಡಿಗೆ ಸೇರ್ಪಡೆ ಮಾಡದಂತೆ ಕಾಲ ಕಾಲಕ್ಕೆ ತಪಾಸಣೆ ನಡೆಸಿ ತಡೆಗಟ್ಟಲು ಅಗತ್ಯ ಕ್ರಮ ಕೈಗೊಳ್ಳುವಂತೆ ಮಹಾನಗರ ಪಾಲಿಕೆಗೆ ನಿರ್ದೇಶಿಸಲಾಗುವುದು.

ಕಡತ ಸಂಖ್ಯೆ: ನಅಇ 192 ಪಿ.ಆರ್.ಜೆ 2021

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು